0601

**Sixth Semester of Three Year LL.B. Degree Examination, December 2013**
**LAW OF EVIDENCE**

Duration : 3 Hours | Max. Marks : 100

**Instructions** : 1. Answer **all five** Questions.
2. **One** essay type and **one** short note question or problem from **each** Unit have to be attempted.
3. Figures to the **right** indicate marks.
4. Answers should be **either** in English or Kannada **completely**.

**UNIT – I**

Q. No. 1. (a) Explain the relevancy of introductory or explanatory facts. Marks : 15

ಪ್ರಸ್ತಾಪಕ ಮತ್ತು ವಿವರಣಾತ್ಮಕ ತಥ್ಯಗಳ ಸುಸಂಬದ್ಧತೆಯನ್ನು ವಿವರಿಸಿರಿ.

OR/**ಅಥವಾ**

Define Admissions. State the persons whose admissions are relevant.

ಒಪ್ಪುವಿಕೆಗಳನ್ನು ವ್ಯಾಖ್ಯಾನಿಸಿರಿ ಮತ್ತು ಯಾವ ವ್ಯಕ್ತಿಗಳ ಒಪ್ಪುವಿಕೆಗಳು ಸುಸಂಬದ್ಧವಾಗುವವೆಂಬುದನ್ನು ತಿಳಿಸಿರಿ.

(b) 'A' is accused of 'B's murder by beating him. At the time of incident there was an exchange of words between 'A' and 'B'. Is this fact relevant. Marks : 5

'ಅ'ನು 'ಬ' ನನ್ನು ಹೊಡೆದು ಕೊಲೆ ಮಾಡಿದ ಆಪಾದನೆಗೊಳಗಾಗಿದ್ದಾನೆ. ಘಟನೆಯ ಸಂದರ್ಭದಲ್ಲಿ ಅವರಿಬ್ಬರ ನಡುವೆ ಪರಸ್ಪರ ವಾದವಾಗಿದೆ ಎಂಬುದನ್ನು ತೋರಿಸಲಾಗಿದೆ. ಈ ವಾಸ್ತವಿಕತೆಯು ಸುಸಂಬದ್ಧವೇ ?

OR/**ಅಥವಾ**

The question is whether 'A' robbed 'B'. Does the fact that, shortly before the robbery, 'B' went to a shop with money in his possession and showed it to third persons, is relevant ?

'ಅ' ನು 'ಬ'ನನ್ನು ಸುಲಿಗೆ ಮಾಡಿದ್ದಾನೆಯೇ ಎಂಬುದು ಪ್ರಶ್ನೆಯಾಗಿದೆ. ಸುಲಿಗೆ ಆಗುವ ಮುಂಚೆ 'ಬ'ನು ತನ್ನೊಂದಿಗೆ ಹಣವನ್ನು ತೆಗೆದುಕೊಂಡು ಒಂದು ಅಂಗಡಿಗೆ ಹೋಗಿದ್ದು ಮತ್ತು ತನ್ನಲ್ಲಿದ್ದ ಹಣವನ್ನು ಬೇರೆ ವ್ಯಕ್ತಿಗಳಿಗೆ ತೋರಿಸಿದ ಘಟನೆಗಳ ಸಾಕ್ಷ್ಯಗಳು ಸುಸಂಬದ್ಧವೇ ?

## UNIT – II

Q. No. 2. (a) What is dying declaration ? What are the conditions for its relevancy ? Marks : 15

ಮರಣಕಾಲಿಕ ಹೇಳಿಕೆಯೆಂದರೇನು ? ಅದರ ಸುಸಂಬದ್ಧತೆಯ ನಿಯಮಗಳಾವುವು ?

OR/ಅಥವಾ

Explain the circumstances in which judgements of the courts become relevant.

ನ್ಯಾಯಾಲಯದ ತೀರ್ಪುಗಳು ಸುಸಂಬದ್ಧವಾಗುವ ಸಂದರ್ಭಗಳನ್ನು ವಿವರಿಸಿರಿ.

(b) 'A' is accused of murder of 'C'. During trial 'A' confesses, I and 'B' murdered 'C' . Can this confession be considered against 'B' ? Marks : 5

'ಅ'ನು 'ಕ' ಎಂಬುವವನನ್ನು ಕೊಲೆ ಮಾಡಿದ ಆಪಾದನೆಗೊಳಗಾಗಿದ್ದಾನೆ. ವಿಚಾರಣೆ ಕಾಲಕ್ಕೆ ಅವನು ನಾನು ಮತ್ತು 'ಬ' ನು 'ಕ ' ನನ್ನು ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಗೆಯನ್ನು ಮಾಡಿರುತ್ತಾನೆ. ಈ ತಪ್ಪೊಪ್ಪಿಗೆಯನ್ನು 'ಬ'ನ ವಿರುದ್ಧ ಪರಿಗಣಿಸಬಹುದೇ ?

OR/ಅಥವಾ

The question is whether 'A' was legitimate son of 'B'. Does the fact that, 'A' was always treated as such by the members of the family relevant ?

'ಅ'ನು 'ಬ'ನ ಧರ್ಮ ಸಮ್ಮತ ಮಗನೇ ಎಂಬುದು ಪ್ರಶ್ನೆಯಾದಾಗ, ಕುಟುಂಬದ ಸದಸ್ಯರಿಂದ 'ಅ'ನನ್ನು ಯಾವಾಗಲೂ ಆ ರೀತಿ ಪರಿಗಣಿಸಲ್ಪಡುತ್ತಿದ್ದನು ಎಂಬ ಸಂಗತಿಯು ಸುಸಂಬದ್ಧವೇ ?

## UNIT – III

Q. No. 3. (a) "Oral evidence must in all the cases whatsoever be direct". Explain with exceptions. Marks : 15

''ಮೌಖಿಕ ಸಾಕ್ಷ್ಯಗಳು ಎಲ್ಲಾ ಪ್ರಕರಣಗಳಲ್ಲಿ ಯಾವುದೇ ಸಂದರ್ಭವಿರಲಿ ನೇರವಾಗಿ ಇರತಕ್ಕದ್ದು''. ಅಪವಾದಗಳೊಂದಿಗೆ ವಿವರಿಸಿರಿ.

OR/ಅಥವಾ

What are public documents ? How they are proved ?

ಸಾರ್ವಜನಿಕ ದಸ್ತಾವೇಜು ಎಂದರೇನು ? ಅವುಗಳನ್ನು ಹೇಗೆ ಸಾಬೀತು ಪಡಿಸಬಹುದು ?

(b) Write a note on relevancy of character evidence in civil cases. Marks : 5

ದಿವಾನಿ ಪ್ರಕರಣದಲ್ಲಿ ಶೀಲ ಸಾಕ್ಷ್ಯದ ಸುಸಂಬದ್ಧತೆ ಕುರಿತು ಟಿಪ್ಪಣಿ ಬರೆಯಿರಿ.

OR/**ಅಥವಾ**

Write a note on secondary evidence relating to documents.

ದಸ್ತಾವೇಜುಗಳ ಕುರಿತು ದ್ವಿತೀಯಕ ಸಾಕ್ಷ್ಯದ ಬಗ್ಗೆ ಟಿಪ್ಪಣಿ ಬರೆಯಿರಿ.

**UNIT – IV**

Q. No. 4. (a) What are presumptions ? Explain the presumption as to the legitimacy of a child. Marks : 15

ಪೂರ್ವಭಾವನೆಗಳೆಂದರೇನು ? ಮಗುವಿನ ಧರ್ಮಜತ್ವದ ಕುರಿತು ಇರುವ ಪೂರ್ವಭಾವನೆಯನ್ನು ವಿವರಿಸಿರಿ.

OR/**ಅಥವಾ**

Define Estoppel. Distinguish it with Resjudicata.

ವಿಬಂಧವನ್ನು ವ್ಯಾಖ್ಯಾನಿಸಿ ಮತ್ತು ಅದನ್ನು ಪೂರ್ವನಿರ್ಣಯದೊಂದಿಗೆ ವಿಂಗಡಿಸಿ.

(b) 'A' sues 'B' for money due on a bond. 'B' has admitted the execution of bond but contends that it was obtained by fraud. 'A' denies it. On whom does the burden of proof lies ? Marks : 5

ಒಂದು ಬಾಂಡಿನನ್ವಯ ಬರಬೇಕಾದ ಹಣಕ್ಕಾಗಿ 'ಅ'ನು 'ಬ'ನ ವಿರುದ್ಧ ದಾವೆ ಹಾಕಿರುವನು 'ಬ'ನು ಆ ಬಾಂಡ್ ಪತ್ರ ಬರೆದುಕೊಟ್ಟಿದ್ದನ್ನು ಒಪ್ಪಿಕೊಂಡಿದ್ದಾನೆ. ಆದರೆ ಅದನ್ನು ಮೋಸದಿಂದ ಬರೆಯಿಸಿಕೊಳ್ಳಲಾಗಿದೆ ಎಂದು ವಾದಿಸಿದ್ದಾನೆ. 'ಅ'ನು ಅದನ್ನು ಅಲ್ಲಗಳೆದಿದ್ದಾನೆ. ಯಾರ ಮೇಲೆ ರುಜುವಾತಿನ ಹೊಣೆಗಾರಿಕೆ ಇದೆ ?

OR/**ಅಥವಾ**

'A' has drawn a bill of exchange upon 'B'. On its presentation 'B' denies that the bill was actually drawn by 'A'. Is 'B' estopped from saying so ?

'ಅ' ನು 'ಬ'ನ ಹೆಸರಿನ ಮೇಲೆ ಒಂದು ಹುಂಡಿಯನ್ನು ಬರೆದಿದ್ದಾನೆ. ಅದನ್ನು 'ಬ'ನ ಹತ್ತಿರ ಹಣಸಂದಾಯಕ್ಕಾಗಿ ಸಲ್ಲಿಸಿದಾಗ ಅದು 'ಅ' ನಿಂದ ಬರೆಯಲ್ಪಟ್ಟಿದ್ದು ಎಂಬುದನ್ನು ಅಲ್ಲಗಳೆದಿದ್ದಾನೆ. 'ಬ' ನು ಹಾಗೆ ಹೇಳುವುದರಿಂದ ಪ್ರತಿಬಂಧಿಸಲ್ಪಟ್ಟಿದ್ದಾನೆಯೇ ?

## UNIT – V

Q. No. 5. (a) Who are competent to testify under Indian Evidence Act ? Examine the competence of the following persons as witnesses.

i) Child witness ii) Dumb witness. Marks : 15

ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಯಾರು ಸಾಕ್ಷ್ಯ ಹೇಳಲು ಸಮರ್ಥರು ? ಈ ಕೆಳಕಂಡ ವ್ಯಕ್ತಿಗಳು ಸಾಕ್ಷಿಯಾಗಲು ಇರುವ ಸಾಮರ್ಥ್ಯವನ್ನು ಪರಿಶೀಲಿಸಿರಿ.

i) ಮಗು ಸಾಕ್ಷಿ ii) ಮೂಕ ಸಾಕ್ಷಿ.

OR/**ಅಥವಾ**

What are leading questions ? When they can be asked ?

ಉತ್ತರ ಸೂಚಕ ಪ್ರಶ್ನೆಗಳೆಂದರೇನು ? ಅವುಗಳನ್ನು ಯಾವಾಗ ಕೇಳಬಹುದು ?

(b) 'A' a client says to 'B', an Advocate, "I have committed forgery and I wish you to defend me". Is this communication protected from disclosure ? Marks : 5

'ಅ' ಎಂಬ ಕಕ್ಷಿದಾರನು 'ಬ' ಎಂಬ ನ್ಯಾಯವಾದಿಗೆ ತಾನು ಫೋರ್ಜರಿ ಮಾಡಿದ್ದುದಾಗಿಯೂ ಮತ್ತು ತನ್ನನ್ನು ರಕ್ಷಿಸಬೇಕೆಂದು ಕೇಳಿಕೊಳ್ಳುತ್ತಾನೆ. ಈ ಹೇಳಿಕೆಯು ಬಹಿರಂಗಗೊಳ್ಳುವಿಕೆಯಿಂದ ರಕ್ಷಿಸಲ್ಪಟ್ಟಿದೆಯೇ ?

OR/**ಅಥವಾ**

A prosecution witness turned hostile during examination in chief. The public prosecutor wants to cross examine him, Can he do so ?

ಒಬ್ಬ ಅಭಿಯೋಜಕ ಪರ ಸಾಕ್ಷಿಯು ಮುಖ್ಯ ವಿಚಾರಣೆಯಲ್ಲಿ ಪ್ರತಿಕೂಲ ಸಾಕ್ಷಿಯಾಗಿದ್ದಾನೆ. ಅಭಿಯೋಜಕಪರ ಅವನನ್ನು ಪಾಟೀ ಸವಾಲಿಗೆ ಗುರಿ ಪಡಿಸಲು ಇಚ್ಛಿಸಿದ್ದಾರೆ. ಅವರು ಹಾಗೆ ಮಾಡಬಹುದೇ ?